# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ಸರ್ವಜ್ಞನಗರ ವಿದಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28 ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 03-10-2020 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು***

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
5. ಶ್ರೀ ಜೋಸ್ಪ, ಕರ ವಸೂಲಿಗಾರರು,
6. ಶ್ರೀ ವೆಂಕಟಾಚಾರ್ಯ, ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ
7. ಶ್ರೀ ರವಿ, ಮೀಟರ್ ರೀಡರ್, ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
8. ಶ್ರೀ ಪ್ರಮೋದ್, ಮಾರ್ಷಲ್

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ವಾರ್ಡಿನ ಕಾರ್ಯದರ್ಶಿ / ನೋಡಲ್ ಅಧಿಕಾರಿಗಳು ರವರನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಆಯಾ ಇಲಾಖೆಯ ಬಗ್ಗೆ ಮಾಹಿತಿಯನ್ನು ಕೇಳಿದರು.

1) **ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು** ರವರನ್ನು ವಾರ್ಡಿನಲ್ಲಿ ವಾರ್ಷಿಕ ಕಂದಾಯ ವಸೂಲಾತಿಯ ಬಗ್ಗೆ ಮಾಹಿತಿಯನ್ನು ಕೇಳಿದಾಗ ಶ್ರೀನಿವಾಸ್ ಕಂದಾಯ ನಿರೀಕ್ಷಕರು ರವರು ಮಾತನಾಡುತ್ತಾ, ವಾರ್ಡಿನಲ್ಲಿ ಒಟ್ಟು 3.50 ಕೋಟಿ ಮೊತ್ತದ ಕಂದಾಯ ವಸೂಲಾತಿ ಮಾಡಬೇಕಾಗಿದ್ದು, ಈ ಮೊತ್ತದಲ್ಲಿ ಶೇ.80 ರ ಭಾಗ ವಸೂಲಾತಿ ಮಾಡಲಾಗಿದ್ದು, ಇನ್ನು ಶೆ.20 ರಷ್ಟು ವಸೂಲಾತಿ ಬಾಕಿ ಇರುವುದಾಗಿ ಸಭೆಯಲ್ಲಿ ತಿಳಿಸಿದರು.

2) **ಶ್ರೀ ರವಿ, ಮೀಟರ್ ರೀಡರ್, ಬಿಡಬ್ಲ್ಯೂ.ಎಸ್.ಎಸ್.ಬಿ** ರವರನ್ನು ವಾರ್ಡಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಎಷ್ಟು ಬಾರಿ ಸರಬರಾಜು ಮಾಡುತ್ತಿರುತ್ತೀರಿ ಹಾಗೂ ಸಾರ್ವಜನಿಕರು ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಅನಧಿಕೃತವಾಗಿ ರಸ್ತೆ ಕತ್ತರಿಸುವುದು ಕಂಡುಬಂದರೆ ವಾರ್ಡಿನ ಸಹಾಯಕ ಅಭಿಯಂತರರ ಗಮನಕ್ಕೆ ತರಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಶ್ರೀ ರವಿ, ಮೀಟರ್ ರೀಡರ್, ರವರು ಮಾತನಾಡಿ, ವಾರಕ್ಕೆ ಎರಡು ಬಾರಿ ನೀರು ಸರಬರಾಜು ಮಾಡುವುದಾಗಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತವಾಗಿ ರಸ್ತೆ ಕತ್ತರಿಸಿರುವುದು ಕಂಡು ಬಂದಲ್ಲಿ ವಾರ್ಡಿನ ಸಹಾಯಕ ಅಭಿಯಂತರರ ಗಮನಕ್ಕೆ ತರಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3) **ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು** ರವರನ್ನು ವಾರ್ಡಿನಲ್ಲಿರುವ ಬ್ಲಾಕ್‌ಸ್ಪಾಟ್‌ಗಳ ಸಂಖ್ಯೆ, ಕಾಂಪ್ಯಾಕ್ಟರ್, ಆಟೋ ಟಿಪ್ಪರ್ ಹಾಗೂ ಪೌರಕಾರ್ಮಿಕರ ಸಂಖ್ಯೆಗಳ ಬಗ್ಗೆ ಮಾಹಿತಿ ನೀಡಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಾಗುತ್ತಿರುವ ಕೊರೊನಾ ಸಾಂಕ್ರಾಮಿಕ ರೋಗದಿಂದ ಸಾರ್ವಜನಿಕರಿಗೆ ಯಾವ ರೀತಿ ಅರಿವು ಮೂಡಿಸುತ್ತಿರುವ ಬಗ್ಗೆ ವಿವರ ಕೇಳಿದಾಗ, ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು ರವರು ಮಾತನಾಡಿ, ವಾರ್ಡಿನಲ್ಲಿ ಒಟ್ಟು 84 ಪೌರಕಾರ್ಮಿಕರು, 03 ಕಾಂಪ್ಯಾಕ್ಟರ್, 24 ಆಟೋ ಟಿಪ್ಪರ್ ಹಾಗೂ 04 ಬ್ಲಾಕ್‌ಸ್ಪಾಟ್‌ಗಳನ್ನು (ಜೆ.ವಿ ಶೆಟ್ಟಿ ರಸ್ತೆ, ಬೆಂಗಳೂರು ಒನ್, ಕನಕದಾಸ ಲೇಔಟ್ ಮತ್ತು ಜೈ

ಭಾರತ್‌ನಗರ ಬಸ್ ನಿಲ್ದಾಣ) ಗುರುತಿಸಿರುವುದಾಗಿ ಹಾಗೂ ಬೀದಿ ವ್ಯಾಪಾರಿಗಳು ಹಾಗೂ ವಾಣಿಜ್ಯ ಸಂಕೀರ್ಣಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಈಗಾಗಲೇ ಕೋವಿಡ್ ಪರೀಕ್ಷೆ ಮಾಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

4) **ಶ್ರೀ ಪ್ರಮೋದ್, ಮಾರ್ಷಲ್** ರವರನ್ನು ವಾರ್ಡಿನಲ್ಲಿರುವ 04 ಬ್ಲಾಕ್‌ಸ್ಪಾಟ್‌ಗಳನ್ನು ಯಾವ ಸಮಯದಲ್ಲಿ ವೀಕ್ಷಣೆ ಮಾಡುತ್ತೀರ ಹಾಗೂ ಇದಕ್ಕೆ ನಿರ್ಧಿಷ್ಟವಾದ ಯಾವುದಾದರೂ ಸಮಯವನ್ನು ನಿಗಧಿಡಿಸಿದ್ದೀರಾ ಎಂದು ಕೇಳಿದಾಗ, ಶ್ರೀ ಪ್ರಮೋದ್, ಮಾರ್ಷಲ್ ರವರು ಮಾತನಾಡಿ, ಬೆಳಗಿನ ಜಾವ 6.30 ಗಂಟೆಗೆ ಹಾಜರಾಗಿ ವಾರ್ಡಿನಲ್ಲಿರುವ ಎಲ್ಲಾ 04 ಬ್ಲಾಕ್‌ಸ್ಪಾಟ್‌ಗಳನ್ನು ವೀಕ್ಷಣೆ ಮಾಡಿ, ಬ್ಲಾಕ್‌ಸ್ಪಾಟ್‌ಗಳಲ್ಲಿ ಶೇಖರಣೆಯಾಗಿರುವ ಕಸವನ್ನು ತೆರವುಗೊಳಿಸುವುದಾಗಿ ತಿಳಿಸಿದರು.

5) **ನೋಡೆಲ್ ಅಧಿಕಾರಿಗಳು** ಮಾತನಾಡುತ್ತಾ, ವಾರ್ಡಿನ ಸಹಾಯಕ ಅಭಿಯಂತರರನ್ನು ವಾರ್ಡಿಗೆ ಮೀಸಲಿಟ್ಟಿರುವ ಅನುದಾನ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರದ ಬಗ್ಗೆ ಮಾಹಿತಿ ನೀಡಲು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಶ್ರೀ ಎಸ್.ರಾಜನ್ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ, ವಾರ್ಡಿನಲ್ಲಿ ಅನುಮೋದನೆಯಾಗಿರುವ ನವ ನಗರೋತ್ಥಾನ ಕಾಮಗಾರಿಗಳು ಸರ್ಕಾರಿ ಹಣಕಾಸು ಅನುಮೋದನೆ ಹಂತದಲ್ಲಿದ್ದು, ಕಾರ್ಯಾದೇಶ ನೀಡಿದ ನಂತರ ವಾರ್ಡಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

ಪ್ರತಿಯನ್ನು

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್‌ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಕಾಂಟಾಕ್ಟ್ ಟ್ರೇಸಿಂಗ್ ನೋಡಲ್ ಅಧಿಕಾರಿ, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
11) ಹೋಮ್ ಕ್ವಾರೆಂಟೈನ್ ಸ್ಕ್ವಾಡ್ ನೋಡಲ್ ಅಧಿಕಾರಿ, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
12) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
13) ಸಹಾಕಯ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
14) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
15) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
16) ಪೋಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ.
17) ಪೋಲೀಸ್ ಇನ್ಸ್‌ಪೆಕ್ಟರ್,(ಸಂಚಾರಿ), ಬಾಣಸವಾಡಿ.
18) ಕಛೇರಿ ಪ್ರತಿ.